9 A.M.

Land Grants (Minimum upset prices.)

Q.—586. **Sri SHIVANANJE GOWDA** (Mysore Taluk).—

Will the Government be pleased to state :—

(*a*) whether a Government Order has been issued that while granting lands for cultivation to landless raiyats a minimum upset price of Rs. 50 for dry lands, Rs. 200 for wet lands and Rs. 250 for bagayat lands should be taken ;

(*b*) if so, whether it has not come to their notice that on this account poor raiyats have been experiencing much difficulty to get lands for cultivation ;

(*c*) whether they will now amend the above said order so as to give lands freely to poor landless raiyats ?

A.—**Sri Kadidal MANJAPPA** (Minister for Revenue and Public Works).—

(*a*) No.

(*b*) and (*c*) Do not arise in view of reply to (*a*).

ಶ್ರೀ ಶಿವನಂಜೇಗೌಡ.—(*a*) ಪ್ರಶ್ನೆಯಲ್ಲಿ ಹೇಳಿರುವ ರೀತಿ ಹಣ ತೆಗೆದುಕೊಂಡಿದ್ದರೆ ವಾಪಸುಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಜಮೀನು ಬೆಲೆ ಹೆಚ್ಚಾಗಿದ್ದರೆ ಅಷ್ಟು ಅಥವಾ ಅದಕ್ಕಿಂತ ಹೆಚ್ಚಾಗಿ ವಸೂಲುಮಾಡಿರಬಹುದು.

ಶ್ರೀ ಶಿವನಂಜೇಗೌಡ.—ಹಿಂದೆ ಮಾಡಿರುವುದನ್ನು ತಪ್ಪಿಸಲು ಸರ್ಕಾರಿ ಹುಕುಂ ಆಗಿರುವುದೆ ?

ಶ್ರೀ ಕಡಿದಾಳ್ ಮಂಜಪ್ಪ.—ಮೂರು ನಾಲ್ಕು ದಿವಸಗಳ ಕೆಳಗೇ ಈ ಪ್ರಶ್ನೆಗೆ ಸಮಂಜಸವಾದ ಉತ್ತರ ಕೊಡರಾಗಿದೆ. ಒಂದು ಸರ್ಕ್ಯುಲರನ್ನು ಸರ್ಕಾರದಿಂದ ಹೊರಡಿಸಿದೆ.

ಶ್ರೀ ಬಿ. ಹುಚ್ಚೇಗೌಡ.—ತಾವು ಸರ್ಕ್ಯುಲರ್ ಕೊಟ್ಟಿರುವುದು ಕೊನೆಯಲ್ಲ. ಆರನೇ ಜನವರಿ 1955 ರಲ್ಲಿ ರೆವೆನ್ಯೂ ಕಮಿಷನರು ಈ ರೀತಿ ಆರ್ಡರು ಮಾಡಿರುತ್ತಾರೆ:—Upset price is very heavy and instructions may be issued to Deputy Commissioners and local authorities . . . . ತಾವು ಆರ್ಡರು ಕೊಟ್ಟ ಮೇಲೆ ರೆವೆನ್ಯೂ ಕಮಿಷನರು 1ನೆ ಫೆಬ್ರವರಿ 1955ರಲ್ಲಿ ತಮ್ಮ ಆರ್ಡರಿಗೆ ವ್ಯತಿರಿಕ್ತವಾಗಿ "The Deputy Commissioners of Districts and local revenue officers are directed to note that the upset price must be considered to have been reduced up to 50 per cent and the valuation of the upset price . . . . " ಎಂದು ಹೇಳಿರುವುದು ತಮ್ಮ ಆರ್ಡರನ್ನು ತಿರಸ್ಕಾರಮಾಡಿದ ಹಾಗಾಗಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಪ್ರಶ್ನೆಗೆ ಆಗಲೇ ಉತ್ತರ ಕೊಡರಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ರೆವೆನ್ಯೂ ಕಮಿಷನರು ಸರ್ಕಾರಿ ಹುಕುಮಿಗೆ ವ್ಯತಿರಿಕ್ತವಾಗಿ ಮಾಡಿರುವುದಕ್ಕೆ ಕ್ರಮ ತೆಗೆದುಕೊಂಡಿದ್ದೀರಾ ?

Sri Kadidal MANJAPPA.—That was answered on the previous occasion during the present session.

ಶ್ರೀ ಬಿ. ಹುಚ್ಚೇಗೌಡ.—ಹಿಂದೆ ನಿಗದಿಮಾಡಿದ್ದನ್ನು ಒಪ್ಪಿಲ್ಲವೆಂದು ಹೇಳಿ ಆರ್ಡರುಮಾಡಿದಮೇಲೆ ರೆವೆನ್ಯೂ ಕಮಿಷನರು ಹೀಗೆ ಮಾಡಿದರೆ ಅದಕ್ಕೆ ರೆಮಿಡಿ ಏನು ?

Sri Kadidal MANJAPPA.—I submitted the other day that he had a discussion with me later on and said that the upset price may be reduced by 50 per cent. Government are considering the question of taking back the circular sent by the Revenue Commissioner or revising the rates suitably.

Sri B. HUTCHE GOWDA.—Deputy Commissioners' order on appeal reducing upset price from Rs. 25 to Rs. 20 per acre in respect of 46 acres granted to 23 persons, 2 acres each under Grow More Food Scheme. ಈ ಒಂದು ಉದಾಹರಣೆ ನೋಡಿ. 23 ಜನರಿಗೆ ಎರಡು ಎಕರೆ ಪ್ರಕಾರ 46 ಎಕರೆ ಕೊಟ್ಟಿದೆ. ಇದು ಡೆಪ್ಯುಟೀ ಕಮಿಷನರ ತಪ್ಪು. ಅದರಮೇಲೆ ಕ್ರಮ ತೆಗೆದುಕೊಂಡು ಎಕ್ಸ್‌ಚೇಂಜ್ ಮಾಡಿದ್ದೀರಾ ? ಈಗ ಇಂಥ 50 ಕೇಸುಗಳಿವೆ. ಎರಡು ಎಕರೆ ಕೊಟ್ಟು ಐದು ರೂಪಾಯಿ ಕಡಮೆ ಮಾಡಲು ಆರ್ಡರು ಮಾಡಿದ್ದಾರೆ. ಇದಕ್ಕೆ ಅಮಲ್ದಾರರು ಮತ್ತು ಸಬ್ ಡಿವಿಜ಼ಿಲ್ ಆಫೀಸರಮೇಲೆ ಕ್ರಮ ತೆಗೆದುಕೊಂಡಿದ್ದೀರಾ? ಇದಕ್ಕೆ ರಿಲೀಫ್ ಏನು ?

Mr. SPEAKER.—If the order contravenes the order issued by the superior officer, they are liable to some action.

Sri B. HUTCHE GOWDA.—What is the position of the subordinate officers ? ಒರಿಜಿನಲ್ಲಾಗಿ ಜಿ. ಎಂ. ಎಫ್. ಸ್ಕೀಂ ಪ್ರಕಾರ ಹತ್ತು ವರ್ಷಗಳ ಹಿಂದೆ ಮಾಡಿರುವುದು, ಈಗ ಜಾಸ್ತಿ ಮಾಡಿಲ್ಲ ಎಂದು ಹೇಳುತ್ತಿದ್ದಾರೆ.

Sri Kadidal MANJAPPA.—If individual cases are brought to my notice and if there is anything wrong, I will set it right, Sir.

Sri B. HUTCHE GOWDA.—I am not concerned about the Darkhastdar or the petitioner ; but what about the lower officers ? If the Revenue Commissioner says one thing and the Government says another, whom should

they obey? ಇದೊಂದೇ ಕೇಸಲ್ಲ, 14 ಸಂದರ್ಭಗಳಲ್ಲಿ ಹೀಗೆ ಒಂದು ಆರ್ಡರಾಗಿದೆ. ಇನ್ನು 30 ಕೇಸುಗಳು ಬೇರೆ ಇವೆ. Out of 14 cases, 6 are ordinary darkhast and 8 are under Grow More Food Scheme. ಹೆಚ್ಚು ಆಹಾರ ಬೆಳೆಯುವ ಯೋಜನೆ ಪ್ರಕಾರ ಕೊಟ್ಟರುವುದಕ್ಕೆ ಸಾಗುವಳಿ ಚೀಟಿಯಲ್ಲಿ ಅಫ್ಸೆಟ್‌ಪ್ರೈಸ್ ಇಷ್ಟು ಎಂದು ಹಾಕಿದೆ. ಅದರ ಮೇಲೆ ವಸೂಲು ಮಾಡಲು ಸರ್ಕಾರಕ್ಕೆ ಅಧಿಕಾರವೇನಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆಯೇ ಈ ವಿಚಾರದಲ್ಲಿ ಸಾಕಾದಷ್ಟು ಸಮಜಾಯಿಷಿ ಕೊಟ್ಟಿದೆ. ಜಿ.ಎಂ.ಎಫ್. ಯೋಜನೆ ಪ್ರಕಾರ ಜಮೀನು ಕೊಟ್ಟಿರುವುದು ಸರಿಯಲ್ಲ, ಹಿಂದೆ ಯಾವ ಬೆಲೆ ನಿಗದಿಮಾಡಿರುತ್ತಾರೋ ಅದನ್ನೇ ತೆಗೆದುಕೊಳ್ಳಬೇಕು; ಒಂದುವೇಳೆ ಅಲ್ಲಿದ್ದ ಸ್ಥಳೀಯ ಸರ್ಕಾರಿ ನೌಕರರು ಮತ್ತು ದರಖಾಸ್ತುದಾರರು ಪರೀಕ್ಷಾಗಿ ಸರ್ಕಾರಕ್ಕೆ ಪೋಸ ಮಾಡುವ ಪರಿಸ್ಥಿತಿಯಿದ್ದರೆ, ಕಡಮೆ ಬೆಲೆ ನಿಗದಿಮಾಡಿದ್ದರೆ ಅಥವಾ ಸರ್ಕಾರದ ಜಮೀನು ಕೊಡಲು ಏನು ಷರತ್ತಿದೆಯೋ ಅದಕ್ಕೆ ವಿರುದ್ಧವಾಗಿ ದರಖಾಸ್ತುದಾರರಿಗೆ ಕೊಟ್ಟಿದ್ದರೆ ಅಂಥ ಸಂದರ್ಭದಲ್ಲಿ ಮಾತ್ರ ಅಫ್ಸೆಟ್ ಬೆಲೆಯನ್ನು ಹೆಚ್ಚಿಸಲು ಅಧಿಕಾರಿಗಳಿಗೆ ಹಕ್ಕಿದೆ.

Lands Granted under Grow More Food Scheme (Disposal by ryots before confirmation).

Q.—588. **Sri SHIVANANJE GOWDA** (Mysore Taluk).—

Will the Government be pleased to state :—

(*a*) whether it has come to their notice that lands given for temporary cultivation under the Grow More Food Scheme have been disposed of even before the said lands were confirmed to saguvalidars;

(*b*) if so, the action taken by them in this respect?

A.—**Sri Kadidal MANJAPPA** (Minister for Revenue and Public Works).—

(*a*) No. Cases of that kind are very few and in such cases action is being taken to confirm or cancel the grants according to the circumstances of the case.

(*b*) Does not arise in view of answer to (*a*).

ಶ್ರೀ ಶಿವನಂಜೇಗೌಡ.—ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕೆಂದು ಹಿಂದೆ ಜಮೀನುಗಳನ್ನು ಜನರಿಗೆ ಕೊಟ್ಟರು. ಅವರ ಹೆಸರಿಗೆ ಆ ಜಮೀನುಗಳು ಖಾಯಂ ಆಗುವುದಕ್ಕೆ ಮೊದಲೇ ವಿಕ್ರಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಉತ್ತರ ಕೊಟ್ಟಿದೆ.

ಶ್ರೀ ಶಿವನಂಜೇಗೌಡ.—ಎಷ್ಟು ಅಂಥ ಸಂದರ್ಭಗಳು ಗಮನಕ್ಕೆ ಬಂದಿವೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಶಿವನಂಜೇಗೌಡ.—ಜಮೀನು ಕೊಡುವ ಸಂದರ್ಭದಲ್ಲಿ ಎಲ್ಲಿ ಜಮೀನಿದೆಯೋ ಅಲ್ಲಿಗೆ ಜನರು ಹೋಗುವುದಿಲ್ಲ ಎಂದು ಸರ್ಕಾರದವರು ಹೇಳುವುದು ನಿಜವೆ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನಿರುವ ಕಡೆಗೆ ಜನರು ಹೋಗುವುದಿಲ್ಲ, ಜನರಿರುವ ಕಡೆಗೆ ಜಮೀನು ಬರುವುದಿಲ್ಲ.

ಶ್ರೀ ಶಿವನಂಜೇಗೌಡ.—ಒಂದು ಸ್ಥಳದಲ್ಲಿರುವ ಜಮೀನನ್ನ ಆ ಸ್ಥಳದವರಿಗೇ ಕೊಡಬೇಕು, ದೂರದಲ್ಲಿರುವವರಿಗೆ ಕೊಡುವುದಿಲ್ಲ ಎಂದು ಅಮಲ್ದಾರರು ಹೇಳುತ್ತಾರೆ. ಹೀಗಿರುವಾಗ ಜಮೀನಿರುವ ಕಡೆಗೆ ಜನ ಹೋಗಬೇಕೆಂದರೆ ಹೇಗೆ?

ಶ್ರೀ ಕಡಿದಾಳ್ ಮಂಜಪ್ಪ.—ಎರಡನ್ನೂ ಗಮನಿಸಿ ಜಮೀನು ವಿಲೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಆಯಾ ಗ್ರಾಮದಲ್ಲಿ ಜಮೀನಿಲ್ಲದಿರುವವರಿಗೆ ಕೊಟ್ಟು ಇನ್ನೂ ಹೆಚ್ಚಾಗಿ ಜಮೀನು ಉಳಿದರೆ ಬಾಕಿಯವರಿಗೆ ಕೊಡುವುದು ಸೂಕ್ತ.

Land grants in Birur Amritmahal Kaval to hostels.

Q.—591. **Sri Y. M. CHANDRASEKHARIAH** (Kadur).—

Will the Government be pleased to state :—

(*a*) the extent of amritmahal kaval at Birur in Kadur Taluk and its survey number ;

(*b*) the number of acres surrendered in the said kaval (survey numberwar details to be furnished);

(*c*) the extent of land granted in each survey number to each of the private hostels and the names of those hostels ;

(*d*) the extent of land granted for the hostels in Survey No. 4;

(*e*) the number of hostels in respect of which applications are received for grant of land in the said Survey No. 4 ;

(*f*) the steps taken in this behalf?